Volume-3, Issue-11, Nov-2014 • ISSN No 2277 - 8160

Research Paper | Kannada

# 770 AMAR GANANGALU

**Dr.(Mrs.) NEELAMBIKA POLICEPATIL**

Principal & Research Guide, Godutai Doddappa Appa Arts & Commerce Degree College For Women, Gulbarga, Karnatak -585103.

## 770 ಅಮರಗಣಂಗಳು (770 AMAR GANANGALU)

'ಇವನಾರವ ಇವನಾರವ ಎಂದೆನಿಸದೆ ಇವನಮ್ಮವ ಇವನಮ್ಮವ ಎಂದೆನಿಸಯ್ಯ' ಎಂಬ ತಮ್ಮ ಉದ್ದೇಶವನ್ನು ಬಸವಣ್ಣನವರು ಸಾಕಾರಗೊಳಿಸಿದರು ಅನುಭವಮಂಟಪದ ಮುಖಾಂತರ. ಜಾತಿ, ಕುಲ, ಲಿಂಗ ಮತ, ಪಂಥವನ್ನೆಲ್ಲಾ ದೂರವಿಟ್ಟು ನಾವೆಲ್ಲರೂ ಒಂದು ಎನ್ನುವ ಭಾವನೆಯಿಂದ ಸಮಾಜವನ್ನು ಕಂಡರು. 'ಎಲ್ಲರೂ, ಎಲ್ಲರಿಗಾಗಿ' ಎಂಬ ತತ್ತ್ವದ ಮೇಲೆ ಕಟ್ಟಲ್ಪಟ್ಟ, ಈ ಅನುಭವ ಮಂಟಪದಲ್ಲಿಯೇ ಅಮರಗಣಂಗಳ ವ್ಯಕ್ತಿತ್ವ ಮಾಗಿ ಹಣ್ಣಾದುದು. ಅವರ ದಿವ್ಯ ಜೀವನ ರೂಪಗೊಳ್ಳಲು ಇದು ಭದ್ರವಾದ ಅಡಿಪಾಯ ಹಾಕಿತು.

ಬಸವಣ್ಣನವರ ಅನುಭವದಲ್ಲಿ ಅರಳಿರುವ ಈ ಅದ್ಭುತ ಸಂಸ್ಥೆಯ ಉಲ್ಲೇಖ ವಚನಗಳಲ್ಲಿ ಮತ್ತು ಕಾವ್ಯಗಳಲ್ಲಿ ಬಂದಿದೆ. ನೀಲಾಂಬಿಕೆಯವರು ತಮ್ಮ ವಚನವೊಂದರಲ್ಲಿ 'ಚನ್ನಬಸವನೆಂಬ ಪ್ರಸಾದಿಯನ್ನು ಪಡೆದು ಅನುಭವ ಮಂಟಪವನ್ನು ಮಾಡಿ ಅನುಭವ ಮೂರ್ತಿಯಾದ ನಮ್ಮ ಬಸವಯ್ಯನು' ಎಂದು ಉಲ್ಲೇಖಿಸುತ್ತಾರೆ. ಕಾಲಜ್ಞಾನ ವಚನೊಂದರಲ್ಲಿ 'ಕೈಲಾಸಮಪ್ಪ ಕಲ್ಯಾಣದಲ್ಲಿ ಲಕ್ಷದ ಮೇಲೆ ತೊಂಭತ್ತಾರು ಸಾವಿರ ದೇವಾಲಯ ಅವಕ್ಕೆ ಮುಖ್ಯವಾದ ತ್ರಿಪುರಾಂತಕ ದೇವಾಲಯ ಮತ್ತು ಮುಂದಣ ಅನುಭವಮಂಟಪದಲ್ಲಿ ಪ್ರಭುದೇವರು, ಸಿದ್ಧರಾಮಯ್ಯ ದೇವರು, ಮೋಳಿಗೆ ಮಾರಯ್ಯಗಳೂ, ಮುಸುಡಿ ಚೌಡಯ್ಯಗಳು, ವೀರಮಡಿವಾಳ ಮಾಚಯ್ಯಗಳು ಮುಂತಾಂದ ಏಳುನೂರಾ ಎಪ್ಪತ್ತು ಅಮರ ಗಣಂಗಳು ಎಲ್ಲಾ ಅಸಂಖ್ಯಾತ ಮಹಾಗಣಂಗಳು ಕೂಡಿದ್ದಲ್ಲಿ' ಎಂದು ಹೇಳಲಾಗಿದೆ. ಹಡಪದ ರೇಚಯ್ಯನವರು ತಮ್ಮ ಕಾಲಜ್ಞಾನ ವಚನವೊಂದರಲ್ಲಿ 'ಚನ್ನಬಸವೇಶ್ವರ ಸ್ವಾಮಿಗಳು ಕಲ್ಯಾಣದಲ್ಲಿ ಅನುಭವಮಂಟಪದ ಗದ್ದುಗೆಯ ಮೇಲೆ ಮೂರ್ತಮಾಡಿ ಎಲ್ಲಾ ಶಿವಗಣಂಗಳು ನಿರೂಪಿಸಿದ ಸಕೀಲ ವಚನ ಎಂದು ಬರೆಯುತ್ತಾರೆ.

ಕೆಲವು ಶರಣರ ವಚನಗಳಲ್ಲಿಯೂ ಕೆಲವು ಸೂಕ್ತಿಗಳು ಬಂದಿದ್ದು ಮಹಾದೇವಿ ಅಕ್ಕ 'ಶರಣರ ಸದ್ಗೋಷ್ಠಿ' ಎಂದೂ, ಅಲ್ಲಮಪ್ರಭುಗಳು 'ಅನುಭಾವ ಗೋಷ್ಠಿ' – ಎಂದೂ, ಸಿದ್ಧರಾಮೇಶ್ವರರೂ 'ಶರಣ ಮಹಾನುಭಾವ ಗೋಷ್ಠಿ' – ಎಂದು ಹೇಳುತ್ತಾರೆ. ಈ ನುಡಿಗಳು ಕೂಡಾ ಅನುಭವ ಮಂಟಪವನ್ನು ಕುರಿತೇ ಹೇಳಿದಂತಿವೆ.

ಅಷ್ಟೇ ಅಲ್ಲ ಶರಣ ಅನುಭವ ಮಂಟಪದೊಳಿರುವ ಪೀಠಕ್ಕೆ 'ಶೂನ್ಯ ಸಿಂಹಾಸನ' – ಎಂದು ಕರೆದಿದ್ದಾರೆ. ಹಲವಾರು ವಚನಕಾರರು ಇದರ ಕುರಿತು ಹೇಳುತ್ತಾರೆ. ನೀಲಾಂಬಿಕೆಯವರು – 'ಅಷ್ಟದಳ ಕಮಲದ ಹೂಗಲ್ಲಿ ವಿಡಿದು ಶೂನ್ಯ ಸಿಂಹಾಸನಕ್ಕೆ ಧವಳಾಲಯವೆತ್ತಿತ್ತು' – ಎಂದು ಹೇಳಿದರೆ ಹಡಪದ ಅಪ್ಪಣ್ಣನವರು ತಮ್ಮೊಂದು ವಚನದಲ್ಲಿ – 'ಕಮಲ ಸಿಂಹಾಸನದ ನಿತ್ಯ' – ಎಂದು ವರ್ಣಿಸಿದ್ದಾರೆ. ಅವರೇ

'ನಿರಾಕಾರದ ಶಕ್ತಿಯಲ್ಲಿ ನಿರಾಳವೆಂಬತನು
ನಿಃಶೂನ್ಯವೆಂಬ ಸಿಂಹಾಸನದ ಮೇಲೆ ಘನವಾಗಿ
ತೊಳಗಿ ಬೆಳಗುತಿರ್ದನು ದಿಶೆಯಲ್ಲಿ
ಮುಖವಾಗಿ ಮುಖವೆಲ್ಲ ಜಗವಾಗಿ ಅಖಂಡ ಪರಿಪೂರ್ಣ
ಪರಬ್ರಹ್ಮ ತಾನಾದನು. ಆ ಮಹಿಮನ ನೆನೆದರೆ ಮನೋಮುಕ್ತಿ
ಕಂಡರೆ ರೂಪಮುಕ್ತಿ ನುಡಿಸಿದರೆ ಶಬ್ದಮುಕ್ತಿ ಸರ್ವಾಂಗ
ಲಿಂಗೈಕ್ಯ ಬಸವಪ್ರಿಯ ಕೂಡಲ ಚನ್ನಸಂಗಯ್ಯ
ನಿಮ್ಮ ಪ್ರಭುವಿನ ಪಾದಕ್ಕೆ ಶರಣೆಂದು ಬದುಕಿದೆನು.

ಇನ್ನೂ ಅನೇಕ ಶರಣರು ಶೂನ್ಯ ಸಿಂಹಾಸನದ ಮೇಲೆ ಕುಳಿತ ಪ್ರಭುದೇವರನ್ನು ವರ್ಣಿಸುತ್ತಾರೆ. ಈ ಎಲ್ಲಾ ಆಧಾರಗಳನ್ನು ಗಮನಿಸಿದ್ದೇ ಆದರೆ ಅನುಭವ ಮಂಟಪವು 12ನೆಯ ಶತಮಾನದಲ್ಲಿ ಕಲ್ಯಾಣದ ಪವಿತ್ರ ನೆಲದಲ್ಲಿ ಇತ್ತು ಎಂಬುದು ಸಿದ್ದವಾಗುತ್ತದೆ.

ಕನ್ನಡದ ಅನೇಕ ಕವಿಗಳು ಅನುಭವ ಮಂಟಪದ ಉಲ್ಲೇಖವನ್ನು ಮಾಡಿದ್ದಾರೆ. ಭೀಮಕವಿಯ 'ಬಸವಪುರಾಣ' ದಲ್ಲಿ ಒಡ್ಡೋಲಗ, ತತ್ತ್ವಗೋಷ್ಠಿ ಮುಂತಾದ ಶಬ್ದಪ್ರಯೋಗಗಳವಿಯಲ್ಲದೆ, 'ಕೂಡಲಸಂಗಮೇಶನ ಭವನಮಂಟಪದೊಳಗೆ ವಿವಿಧ ಭಕ್ತರವೆರಸಿ'– ಎಂಬ ವಾಕ್ಯವಿದೆ 'ಭವನಮಂಟಪ'– ಇದು ಅನುಭವಮಂಟಪವನ್ನು ಉಲ್ಲೇಖಿಸಿಯೇ ಹೇಳಿದಂತಿದೆ. ಅನುಭವಮಂಟಪದ ಅಸಂಖ್ಯಾತ ಶರಣರನ್ನು ಕುರಿತು ರಗಳೆ ಬರೆದಿರುವ ಹರಿಹರನು ತನ್ನ ರಗಳೆಗಳಲ್ಲಿ ಅನುಭವಮಂಟಪದ ಶಬ್ದದ ಉಲ್ಲೇಖಮಾಡಿರದಿದ್ದರೂ ಸದ್ಗೋಷ್ಠಿ ಗೀತಗೋಷ್ಠಿ ಮುಂತಾದ ಶಬ್ಧಪ್ರಯೋಗ ಮಾಡಿದ್ದಾನೆ.

ಕವಿ ಸಿಂಗಿರಾಜ ತನ್ನ ಕೃತಿ ' ಸಿಂಗಿರಾಜ ಪುರಾಣ' ದಲ್ಲಿಯೂ
'ಶ್ರೀಕಾರದಾಕಾರವಾಗಿ ಕಲ್ಯಾಣ ಭೂ
ನಾಕೇಶ್ವರನ ಪದ್ಮ ಸ್ಥದ ಹಸ್ತ ತಾನಾಗಿ
ವಾಕುಮನ ನಯನ ಕರಚರಣ ದೈಮುಖಪರ್ಧು ತನ್ನರಮನೆಯಲ್ಲಿ
ಪಾಕಶಾಸನ ಪ್ರಸಸ್ತಿದೋಳು ಮಯನಿರ್ಮಿತನಿ
ಜಾಕಾರ ಕೈವಲ್ಯನಾಮ ಜಂಗಮ ಲಿಂಗ.'
'
ಭಾವ ಬ್ರಹ್ಮ ಸ್ವರೂಪಿತ ತತ್ವನಿಜಮಹಾ
ಕೇವಲ ಜ್ಞಾನ ಜ್ಯೋತಿರ್ಲಿಂಗ ಲಿಂಗದೇ
ಹಾವಯವ ನಿರ್ದೇಶದೇಡಿಕದಿ ಬಂದೆನ್ನದಾಸೋಹ ಕರ್ಮವ
ತಾವವಗ್ರಡಿಸೆನಗೆ ಸೋಹಾಮ್ನತವನೂಡಿ
ದಾವಿಭೂ ಪ್ರಸನ್ನೋತ್ತರದಿ ಮೂರ್ತಿಗೊಳಲೆರೆವ
ಭಾವಕಿಕ್ಕಿದ ಪ್ರತಿಷ್ಠಿತವೆನವಿ ಶೂನ್ಯಸಿಂಹಾಸನಮನದಲ್ಲಿ ಸಿದಳ್ವ'

ಎಂದು ಬರೆಯುತ್ತಾನೆ. ಈ ಕಾವ್ಯಪದ್ಯಗಳಲ್ಲಿ ಬಸವಣ್ಣನವರ ಅರಮನೆ (ಮಹಾಮನೆ) ಮಹಾಮಂಟಪ (ಅನುಭವ ಮಂಟಪ) ಶೂನ್ಯಸಿಂಹಾಸನಗಳ ವಿವರಣೆ ಇದೆ

'ಪ್ರಭುದೇವರ ಪುರಾಣ' 'ಚನ್ನಬಸವ ಪುರಾಣ' –ಗಳಲ್ಲಿ ಅನುಭವಮಂಟಪದ ಶಬ್ದ ಪ್ರಯೋಗವಿದೆ.
'ನೆಲೆಗಟ್ಟು ಸಪ್ತ ಮಹಾಕೋಟಿ ಮಂತ್ರಗಳಲ್ಲಿ
ಚಲುವ ಮೂವತ್ತಾರು ಸಾಲ್ಗಂಭಗಳು
ಲಲಿತಷಟ್‌ತ್ರಿಂಶ ಶಕ್ತಿಯರು ಬೋದಿಗೆಯ ಮೂವತ್ತಾರು ಭಕ್ತಿಕ್ರಮದಿಂ
ತೊಲೆಗಳುಂ ಮೇಲ್ಪಲಗೆನೂರೊಂದು ಸ್ಥಳಗಳಲೆ
ಯುಲಿಯುತಿಹ ಉಪಮಂತ್ರ ಇತ್ತಿದೆಯ ಮೇಲ್ಗಾರೆ
ಕಲಿತ ಷಟ್ ತ್ರಿಂಶ ಪ್ರಣಮದ ಬಸವರಾಜನನುಭವ ಮಂಟಪ.

ಮೇಲಿನ ಆಧಾರಗಳು ಗಮನದಲ್ಲಿರಿಸಿಕೊಂಡು ಹೇಳುವದಾದರೆ ಅನೂಭವ ಮಂಟಪ ಬಸವಣ್ಣನವರಿಂದ ಕಲ್ಯಾಣದಲ್ಲಿ ಸ್ಥಾಪಿತಗೊಂಡ ವೈಚಾರಿಕ ನೆಲೆಯಾಗಿತ್ತು. ಆದರೆ ಇಂದಿನ ಬಸವಕಲ್ಯಾಣದಲ್ಲಿ ಅದು ಎಲ್ಲಿತ್ತು ? ಎಂದು ಗುರುತಿಸುವದು ಅಸಾಧ್ಯವಾಗಿದೆ. ಅದರ ಕುರುಹುಗಳು ಅಲ್ಲಿ ಇಲ್ಲದೆ ಇರುವದರಿಂದಲೇ ಅನುಭವಮಂಟಪದ ಅಸ್ತಿತ್ವದ ಬಗ್ಗೆ ನಾನಾರೀತಿಯ ಅಭಿಪ್ರಾಯಗಳು ಹುಟ್ಟಿಕೊಂಡಿವೆ.

ಆದರೆ ಇಂದಿನ ಕಲ್ಯಾಣದ ತ್ರಿಪುರಾಂತಕ ಕೆರೆಯ ದಂಡೆಯಮೇಲಿನ ನುಲಿಯಚಂದಯ್ಯನವರ ಗವಿಯ ಮೇಲೆ ಅನುಭವಮಂಟಪದ ಕಟ್ಟಡವಿತ್ತೆಂದು ಸ್ಥಳೀಯರು ಗುರುತಿಸುತ್ತಾರೆ ಆ ಸ್ಥಳವನ್ನು ತೋರಿಸುತ್ತಾರೆ. ಆಸ್ಥಳದಲ್ಲಿ ನಾಲ್ಕುಕಡೆ ನಾಲ್ಕು ಗೋಡೆಗಳಿದ್ದೂ ಅದರೊಳಗೆ ಒಂದು ದೊಡ್ಡ ಗದ್ದುಗೆ ಇತ್ತೆಂದೂ ಅದರ ಮೇಲೆ ಅತೀ ದೊಡ್ಡದಾದ ಕಲ್ಲಿನ ಮೇಲ್ಛಾವಣೆ ಕಮಲದಾಕಾರದಲ್ಲಿ ಕೆತ್ತಲ್ಪಟ್ಟಿತ್ತೆಂದೂ ಅದನ್ನು ಶೂನ್ಯಸಿಂಹಾಸನವೆಂದು ಜನ ಕರೆಯುತ್ತಿದ್ದರೆಂದು ಅಲ್ಲಿಯ ಹಿರಿಯರು ಹೇಳುತ್ತಾರೆ.

ಇತ್ತೀಚೆಗೆ ಅಂದರೆ ಸುಮಾರು 50–60 ವರ್ಷಗಳಿಗಿಂತ ಮೊದಲು ಒಬ್ಬ ಮುಸ್ಲಿಮಗೃಹಸ್ಥ ಆ ಕಮಲದ ಹೂವಿನ ಕಲ್ಲನ್ನು ಕೆಡವಿ ಅದರಿಂದ ಬಂದ ಒಂಭತ್ತು ಲಾರಿಗಳಷ್ಟು ಕಲ್ಲುಗಳನ್ನು ಮನೆ ಕಟ್ಟಲು ಬಳಸಿದ್ದಾರೆ. ಅಲ್ಲಿರುವ 36 ಕಂಭಗಳನ್ನು ಕಲ್ಯಾಣದ ಪೀರಪಾಶಾ ಬಂಗಲೆಯಲ್ಲಿ ಇಟ್ಟಿದ್ದಾರೆ. ಅಲ್ಲಿ ಇಂದಿಗೂ ಆ ಕಂಭಗಳನ್ನು ಕಾಣಬಹುದಾಗಿದೆ.

ಬಸವಕಲ್ಯಾಣದ ಸ್ಥಳಿಯರ ಅಭಿಪ್ರಾಯಗಳನ್ನು ಗಮನಿಸಿ ಹೇಳುವದಾದರೆ, ಅನುಭವಮಂಟಪಕ್ಕೆ ಅದರದ್ದೇ ಆದ ಕಟ್ಟಡವಿತ್ತೆಂದು ತೋರುತ್ತದೆ. ತ್ರಿಪುರಾಂತಕ ಕೆರೆಯದಂಡೆಯ ಮೇಲಿರುವ ಪ್ರಶಾಂತವಾದ ಸ್ಥಳ, ಉತ್ತಮ ವಾತಾವರಣ ಇವುಗಳನ್ನು ಕಂಡರೆ ಅನುಭವಮಂಟಪದ ಕಟ್ಟಡ ಅಲ್ಲಿರಬಹುದೆಂದಿನಿಸುತ್ತದೆ. ಅಲ್ಲದೆ ಯಾವುದೇ ಒಂದು ಕಾರ್ಯಕ್ರಮ ನಡೆಯಬೇಕಾದರೆ ಒಂದು ಸ್ಥಳ ಬೇಕೇ ಬೇಕು. ಹೊರಗಿನಿಂದ ಬರುವಂತಹವರಿಗೆ ಒಂದು ಸ್ಥಳದ ಗುರುತು ತಿಳಿದಿರಲೇಬೇಕಾಗುತ್ತದೆ. ಏಳ್ನೂರೆಪ್ಪತ್ತು ಅಮರಗಣಂಗಳಂತು ಖಾಯಂ ಅದರ ಸದಸ್ಯರಾಗಿದ್ದರು. ಇವರೊಂದಿಗೆ ಅಲ್ಲಿ ನಡೆಯುವ ಅನುಭಾವ ಗೋಷ್ಠಿಯಲ್ಲಿ ಹೆಚ್ಚಿನ ಶರಣರು ಬಂದು ಸೇರುತ್ತಿದ್ದರು. ಎಲ್ಲಿ ಸ್ಥಳಸಿಕ್ಕಿತೋ ಅಲ್ಲಿ ಕೂಡುತ್ತಿದ್ದರೆಂಬ ಅಭಿಪ್ರಾಯ ಅಷ್ಟು ಸಮಂಜಸವೆನಿಸುವುದಿಲ್ಲ.

ಬಸವಣ್ಣನವರ ಮಹಾಮನೆಯಲ್ಲಿಯೇ ಅನುಭವ ಮಂಟಪವಿತ್ತು ಎಂಬುದು ಇನ್ನೊಂದು ವಾದವಿದೆ. ಆದರೆ ಮಹಾಮನೆಯೇ ಬೇರೆ ; ಅನುಭವ ಮಂಟಪವೇ ಬೇರೆ. ಬಸವಣ್ಣನವರ ಮಹಾಮನೆಯಲ್ಲಿ ಲಿಂಗಪೂಜೆ, ಶರಣರ ದಾಸೋಹ ನಡೆದರೆ, ಅನುಭವ ಮಂಟಪದಲ್ಲಿ ಅನುಭಾವ ಗೋಷ್ಠಿಗಳು ನಡೆಯುತ್ತಿದ್ದವು. ಪ್ರಭುದೇವರು ಸಿದ್ಧರಾಮರೊಂದಿಗೆ ಬಸವಣ್ಣನವರ ಮಹಾಮನೆಗೆ ಬಂದಾಗ ಅವರು ಲಿಂಗಪೂಜೆಯಲ್ಲಿದ್ದರು ಎಂಬ ವಿಷಯ ಶೂನ್ಯಸಂಪಾದನೆಯಿಂದ ತಿಳಿದು ಬರುತ್ತದೆ. ಅಂಬಿಗರ ಚೌಡಯ್ಯನವರು ಸಹ ತಮ್ಮೊಂದು ವಚನದಲ್ಲಿ,

"ಅಯ್ಯಾ ! ಪಾಷಾಣಕ್ಕೆ ಗಿರಿಸವೆದವು ;
ಪತ್ರಿಗೆ ತರುಸವೆದವು
ಸಪ್ತ ಸಾಗರಂಗಳು ಮಜ್ಜನಕ್ಕೆ ಸವೆದವು
ಅಗ್ನಿ ಧೂಪಕ್ಕೆ ಸವೆಯಿತ್ತು
ವಾಯು ಕಂಪಿತಕ್ಕೆ ಸವೆಯಿತ್ತು
ಉಘೆ ! ಚಾಂಗು ಭಲಾ ಎಂಬ ಶಬ್ದ ಸವೆಯಿತು ಎನಗಿನ್ನೆಂತೊ
ಉಮೇಶನ ಶರಣರು ಮಹಾಮನೆಯಲ್ಲಿ ಶಿವಲಿಂಗಾರ್ಚನೆಗೆ ಕುಳ್ಳಿದ್ದಡೆ
ನಾನವರ ಪಾದರಕ್ಷೆಯ ಕಾಯ್ದು ಕೊಂಡಿದ್ದೆನೆಂಬನಂಬಿಗ ಚೌಡಯ್ಯ"

**ಎಂದು ಹೇಳುತ್ತಾರೆ.**

ಆದ್ದರಿಂದ ಮಹಾಮನೆಯಲ್ಲಿ ಲಿಂಗಪೂಜೆ ಮತ್ತು ದಾಸೋಹ ನಡೆಯುತ್ತಿದ್ದವು. ಅನುಭವ ಮಂಟಪದಲ್ಲಿ ಅನುಭಾವ ಗೋಷ್ಠಿಗಳು ನಡೆಯುತ್ತಿದ್ದವು.

ಈ ಅನುಭವಮಂಟಪವೇ ಅಮರಗಣಂಗಳ ಉಜ್ವಲ ಬದುಕಿಗೆ ಭದ್ರವಾದ ಬುನಾದಿಯಾಯಿತು. ಅವರ ಲೌಕಿಕ ಮತ್ತು ಪಾರಮಾರ್ಥಿಕ ಬದುಕು ಇಲ್ಲಿ ಹಸನವಾಯಿತು. ಅವರೆಲ್ಲರೂ ಇಲ್ಲಿ ಜೀವನದ ಅಂತಿಮ ಸತ್ಯವನ್ನು ಕಂಡುಕೊಂಡವರು. ಅನುಭವಮಂಟಪದ ಸ್ವತಂತ್ರ ವಾತಾವರಣದಲ್ಲಿ ಅವರು ನಿರ್ಭಯವಾಗಿ ವಿಚಾರಿಸಿದರು, ನಿರ್ಭಯವಾಗಿ ಬರೆದರು, ನಿರ್ಭಯವಾಗಿ ನುಡಿದರು, ನಿರ್ಭಯವಾಗಿ ನಡೆದರು, ಅದರ ಜ್ಞಾನಕಿರಣದಲ್ಲಿ ಬೆಳಕನ್ನು ಪಡೆದರು. ತಾವು ಎಚ್ಚೆತ್ತುಗೊಂಡು ಇನ್ನೊಬ್ಬರನ್ನ ಎಚ್ಚರಿಸಿದರು. ಜಾತಿ, ಕುಲ, ಮತ, ಪಂಥ, ಲಿಂಗ ಇವುಗಳ ಬಂಧನದಿಂದ ಮುಕ್ತರಾದರು. ಹೀಗಾಗಿ ಅದು ನಡೆ–ನುಡಿ, ಜ್ಞಾನ–ಕ್ರಿಯೆ, ಕಾಯಕ–ದಾಸೋಹ ಒಂದಾಗಿಸಿಕೊಂಡ ಶಿವಾನುಭವಿಗಳ ಸಮ್ಮೇಳನವಾಗಿತ್ತು.

ಅದೊಂದು ಅವರಿಗೆ ಜೀವಂತ ಪ್ರಯೋಗಶಾಲೆಯಾಯಿತು. ಅಲ್ಲಿ ನಡೆದ ಅನುಭವ ಎಂತಹದು? ಅದರಿಂದ ತಾವು ಪಡೆದುದೇನು? ಎಂಬುದನ್ನು ಅಮರಗಣಂಗಳು ತಮ್ಮ ವಚನಗಳಲಿ ಹೇಳಿದ್ದಾರೆ.

ಒಂದು ದಿನ ಲಿಂಗಪೂಜೆ ಸಾಲದೆ ?
ಅನಂತಕಾಲ ಲಿಂಗಪೂಜೆಯ ಮಾಡುವುದರಿಂದ
ಒಂದು ದಿನ ಗುರುಚರಣ ಸೇವೆ ಸಾಲದೇ ?
ಅನಂತಕಾಲ ಗುರುಚರಣದ ಸೇವೆಯ ಮಾಡುವುದರಿಂದ
ಒಂದು ದಿನ ಜಂಗಮಕ್ಕೆ ತೃಪ್ತಿಯ ಮಾಡುವದು ಸಾಲದೆ ?
ಅನಂತಕಾಲ ಜಂಗಮಕ್ಕೆ ತೃಪ್ತಿಯ ಮಾಡುವದರಿಂದ
ಒಂದು ನಿಮಿಷ ಕೂಡಲಸಂಗಯ್ಯ
ನಿಮ್ಮ ಶರಣರ ಅನುಭಾವ ಸಾಲದೆ ?

ಬಸವಣ್ಣನವರು ತಮ್ಮ ಈ ವಚನದ ಮುಖಾಂತರ ಗಣಂಗಳ ಅನುಭಾವದ ಮಹತ್ವವನ್ನು ಮನದಟ್ಟು ಮಾಡಿಕೊಡುತ್ತಾರೆ ಮನೆಯನ್ನು, ಮಡದಿ ಮಕ್ಕಳನ್ನು ತೊರೆದು ಕಾಡಿಗೆ ಹೋಗಿ ತಪಸ್ಸು ಮಾಡುವದಕ್ಕಿಂತಲೂ ಗುರುಚರಣ ಸೇವೆಗಿಂತಲೂ, ಲಿಂಗಪೂಜೆಗಿಂತಲೂ, ಜಂಗಮತೃಪ್ತಿಗಿಂತಲೂ ಶರಣರ ಅನುಭಾವವು ಶ್ರೇಷ್ಠವೆನ್ನುತ್ತಾರೆ. ಪ್ರಮಥರಾಡಿದ ನುಡಿಗಳು ಅನುಭವಗಮ್ಯವಾಗಿರುವದರಿಂದ ಅವು ಬೇಸರ ತರಲಾರವು. ಒಬ್ಬೊಬ್ಬ ಅನುಭಾವಿಯ ಒಂದೊಂದು ಮಾತು ಕೇಳುವುದರಿಂದ ಒಂದೊಂದು ಫಲಉಂಟಾಗುತ್ತದೆ ಎನ್ನುತ್ತಾರೆ ಕಿನ್ನರಿಬೊಮ್ಮಣ್ಣ.

ಪ್ರಭುವಿನ ವಾದದಿಂದ ವೈರಾಗ್ಯಸಂಪತ್ತು.
ಬಸವನ ವಾದದಿಂದ ಭಕ್ತಿಯ ಸಂಪತ್ತು
ಚನ್ನಬಸವನ ವಾದದಿಂದ ದಿವ್ಯಪ್ರಸಾದ ಸಂಪತ್ತು
ನೀಲಮ್ಮನ ವಾದದಿಂದ ಲಿಂಗಪೂಜೆಯ ಸಂಪತ್ತು
ಮಡಿವಾಳಯ್ಯನ ವಾದದಿಂದ ಜ್ಞಾನದ ಸಂಪತ್ತು
ಸಕಲೇಶನ ವಾದದಿಂದ ಶಾಂತಿಯ ಸಂಪತ್ತು
ಮೋಳಿಗಯ್ಯನ ವಾದದಿಂದ ದಾಸೋಹ ಸಂಪತ್ತು.
ಇದುಕಾರಣ ಪ್ರಮಥರ ನುಡಿಯಲ್ಲಿ ಬೇಸರ ತರದು

ಇನ್ನೂ ಅನೇಕ ಅಮರಗಣಂಗಳು ತಮ್ಮ ವಚನಗಳಲ್ಲಿ ಶರಣರ ನಡುವೆ ನಡೆದ ಅನುಭಾವಗೋಷ್ಠಿಯ ಪ್ರಾಮುಖ್ಯತೆಯನ್ನು ಎತ್ತಿ ಹೇಳುತ್ತಾರೆ.

'ನಮ್ಮ ಶರಣರ ಅನುಭಾವ ಸಂಗದಿಂದಾನು ಪರಮ ಸುಖಿಯಾದೆನಯ್ಯಾ'
'ಶರಣರ ಅನುಭಾವದಿಂದ ಮನದ ಕೇಡು ಅಳಿವುದು ನೋಡಯ್ಯಾ'
'ಶರಣರ ಅನುಭಾವದಲ್ಲಾನು ಪರಮ ಸುಖಿಯಾದೆನಯ್ಯಾ'
'ಮಹಾನುಭಾವರ ಸಂಗದಿಂದ ಜ್ಞಾನಾಗ್ನಿ ಹುಟ್ಟಿ'
'ಮಹಾನುಭಾವರ ಸಂಗದಿಂದ ತನ್ನ ತಾನರಿಯಬಹುದು.'

ಹೀಗೆ ಅನುಭವಮಂಟಪದಲ್ಲಿ ಅರಳಿರುವ ಅಮರಗಣಂಗಳು ಅದರ ಇಡೀ ಉದ್ದೇಶಗಳನ್ನು ಈಡೇರಿಸುವದರಲ್ಲಿ ಸಫಲರಾದರು. ತಮ್ಮ ತನು–ಮನಗಳ ಕೇಡನ್ನು ಅಳಿಸಿಕೊಂಡು ಸಮಾಜದ ಆತ್ಮೋದ್ಧಾರಕ್ಕೋಸ್ಕರ ಪ್ರಯತ್ನಿಸಿ ಸಫಲರಾದರು, ಆಧ್ಯಾತ್ಮ ಯೋಗಿಗಳಾದ ಆ ಗಣಂಗಳ ವ್ಯಕ್ತಿತ್ವ ಎಂತಹದೆಂಬುದನ್ನು ಅಲ್ಲಮ ಪ್ರಭುಗಳು ಹೀಗೆ ಹೇಳುತ್ತಾರ

. 'ಸರ್ವ ಜೀವ ದಯಾ ಪರತ್ವವುಳ್ಳ ಸದ್ಭಕ್ತ ಶಿವಶರಣಗಂಣಂಗಳಲ್ಲಿ
ಮುಗಿಲ ಮರೆಯ ಸೂರ್ಯನಂತೆ ನೆಲದ–ಮರೆಯ ನಿಧಾನದಂತೆ
ಒಲೆಯ ಮರೆಯ ಅಲಗಿನಂತೆ
ಹಣ್ಣಿನ ಮರೆಯ ರಸದಂತೆ ಪರಮಪಾವನ ಮೂರ್ತಿ
ನಿರವಯ ಘನನೊಡಗೂಡಿ
ಏಕಸ್ವರೂಪದಿಂದ ಗುಹೇಶ್ವರಾ ಲಿಂಗವು ತಾನು ತಾನಾಗಿದ್ದರು'

'ದಯವೇ ಧರ್ಮದ ಮೂಲ'–ಎಂಬ ಮಂತ್ರವನ್ನು ಜಪಿಸುತ್ತಾ, ಎಲ್ಲಾ ಜನರನ್ನು ಕರೆಕರೆದು ತಮ್ಮ ಜ್ಞಾನವನ್ನು ಹಂಚಿದರು, ಸಾಮೂಹಿಕ ಉದ್ಧಾರವು ಅವರ ನಿಲುವಾಗಿತ್ತು. ಯಾರ ಹಂಗಿಗೂ ಒಳಗಾಗದೆ ಸ್ವತಂತ್ರರಾಗಿ ಬದುಕಿದರು. ಅಂತೆಯೇ ಕಲಕೇತಯ್ಯ ಶರಣರು.

'ಬಸವಣ್ಣ ಚನ್ನಬಸವಣ್ಣ ಇವರೊಳಗಾದ ಏಳ್ನೂರೆಪ್ಪತ್ತುಮರಗಣಂಗಳು.
ಸ್ವತಂತ್ರ ಸಂಬಂಧಿಗಳಪ್ಪ ಪ್ರಮಥರು
ಶಿವಾಚಾರ ಚಕ್ರವರ್ತಿಗಳು
ಸತ್ಯರು ನಿತ್ಯರು ಸದ್ಯುನ್ಮುಕ್ತರು
ಸುಮನರು ವಿಮಲರು ಪೂರ್ಣರು ಪರಿಪೂರ್ಣರು
ಮೇಖೇಶ್ವರ ಲಿಂಗದಲ್ಲಿ ಮಹಾನುಭಾವಿಗಳು'

ಎಂದು ಅಮರಗಣಂಗಳ ವ್ಯಕ್ತಿತ್ವವನ್ನು ಹೊಗಳಿದ್ದಾರೆ. 'ಶಿವಾಚಾರದ ಚಕ್ರವರ್ತಿಗಳು' ಎಂಬ ಅವರ ನುಡಿ ಅಮರಗಣಂಗಳು ಏರಿದ ನಿಲುವನ್ನು ಸ್ಪಷ್ಟಪಡಿಸುತ್ತದೆ. ಕೆಲವರ ಸ್ವತ್ತಾಗಿದ್ದ ಧರ್ಮವು ಅವರಲ್ಲಿ ವಿಶಾಲವ್ಯಾಪ್ತಿಯನ್ನು ಪಡೆಯಿತು 'ಅದು ಯಾರ ಸ್ವತ್ತಲ್ಲ, ಯಾರು ಅರಿತು ನಡೆಯುತ್ತಾರೋ ಅವರಿಗೆ ಧರ್ಮ ಅಡಿಯಾಳಾಗುತ್ತದೆ' ಎಂಬ ಸತ್ಯವನ್ನು ತಮ್ಮ ಕ್ರಿಯೆಯಿಂದ ತೋರಿಸಿಕೊಟ್ಟರು.

770 ಅಮರಗಣಂಗಳ ಆಚಾರ–ವಿಚಾರಗಳೆಲ್ಲಾ ಏಕರೂಪವಾಗಿದ್ದವು. ಅವರು ಹೊಂದಿರುವ ಲಕ್ಷಣಗಳನ್ನು ಹೀಗೆ ಸಂಗ್ರಹಿಸಬಹುದು.

1) ನಡೆ–ನುಡಿ ಸಮನ್ವಯಿಗಳು.
2) ಕಾಯಕಯೋಗಿಗಳು
3) ದಾಸೋಹ ಸಂಪನ್ನರು
4) ಜಾತಿ–ಮತ ಭೇದ ಕಿತ್ತೊಗೆದವರು,
5) ಮೂಢನಂಬಿಕೆಗಳನ್ನು ಧಿಕ್ಕರಿಸಿದವರು.
6) ಏಕದೇವೋಪಾಸಕರು
7) ಪ್ರಸಾದದಲಿ ಪಾವಿತ್ರ್ಯತೆ ಕಂಡವರು
8) ಪರಸ್ತ್ರೀಯರನ್ನು ಹೆತ್ತತಾಯಿಯಂತೆ ಕಂಡವರು
9) ಪರರದನ್ನು ಮುಟ್ಟದವರು
10) ಅರಿಷಡ್ವರ್ಗಗಳನ್ನು ಮೀರಿದವರು
11) ಅಷ್ಟಾವರಣಿಗಳು
12) ಪಂಚಾಚಾರಿಗಳು
13) ಷಟ್‌ಸ್ಥಲ ಸಂಪನ್ನರು
14) ಜಂಗಮ ಪ್ರೇಮಿಗಳು
15) ಸ್ತ್ರೀಕುಲಕ್ಕೆ ಸ್ವಾತಂತ್ರ್ಯ ಕೊಟ್ಟವರು
16) ವಚನ ಸಾಹಿತ್ಯದ ರೂವಾರಿಗಳು.

**ನಡೆ–ನುಡಿ ಸಮನ್ವಯಿಗಳು:–**

ಅಮರಗಣಂಗಳ ದೃಢಸಂಕಲ್ಪವೆಂದರೆ ನುಡಿದಂತೆ ನಡೆಯುವುದು.ಹೀಗಾಗಿ ಅವರ ಕಾಲ ಒಂದು ಚೈತನ್ಯಾತ್ಮಕ ಯುಗವೆನಿಸಿತು.ಜೊಳ್ಳು ಮಾತುಗಳನ್ನು ಶರಣರು ಆಡಲಿಲ್ಲ;ಆಡುವುದಕ್ಕೆ ಆಸ್ಪದ ಕೊಡಲಿಲ್ಲ. ಅವರಾಡಿದ ಮಾತಿಗೆ ಅವರ ಲಿಂಗ ಸಾಕ್ಷಿಯಾಯಿತು. ಆ ಮಾತಿಗೆ ಲಿಂಗವು ಹೌದು ಹೌದು ಎಂದು ನುಡಿಯಿತು. ಕಾರಣ ಇಷ್ಟೆ ಆ ಮಾತು ಒಳ್ಳೆಯ ನಡೆಯಿಂದ ಕೂಡಿದುದಾಗಿತ್ತು

' ನುಡಿಯಲ್ಲಿ ಎಚ್ಚೆತ್ತು ನಡೆಯಲ್ಲಿ ತಪ್ಪಿದರೆ
ಹಿಡಿದಿದ್ದ ಲಿಂಗವು ಘಟಸರ್ಪನಂತೆ'

ಎಂಬ ಎಚ್ಚರಿಕೆಯನ್ನುಕೊಟ್ಟರು. ಮತ್ತು ತಾವು ಕೂಡಾ ಆ ಎಚ್ಚರಿಕೆಯಲ್ಲಿಯೆ ಜೀವನ ನಡೆಸಿದರು. ನಡೆನುಡಿಯನ್ನು ಸಾಮರಸ್ಯಗೊಳಿಸಿದರು.

**ಕಾಯಕಯೋಗಿಗಳು :–**

770 ಅಮರಗಣಂಗಳು ಕೂಡಾ ಕಾಯಕ ಯೋಗಿಗಳಾಗಿದ್ದರು. ಕಾಯಕಕ್ಕೆ ಅವರು ಮೊದಲ ಪ್ರಾಶಸ್ತ್ಯ ಕೊಟ್ಟಿದ್ದರು .ಅವರು ಕಾಯಕದಲ್ಲಿ ಕೇವಲ ಮಾತನಾಡಿ ಹೊಟ್ಟೆ ತುಂಬಿಸಿಕೊಳ್ಳಲಿಲ್ಲ;ಹಾಗೇ ಮಾಡುವಲ್ಲಿ ಅವರಿಗೆ ನಂಬಿಕೆಯಿರಲಿಲ್ಲ. ಕಾಯ ಕೈಲಾಸವಾಗಬೇಕಾದರೆ, ಕಾಯವು ಕಾಯಕದಲ್ಲಿ ಮಗ್ನವಾಗಬೇಕೆಂದು ಹೇಳಿದರು. ಹುಟ್ಟಿದ ಪ್ರತಿಯೊಬ್ಬ ಮಾನವ ಕಾಯಕ ಮಾಡಲೇಬೇಕು. ರಾಜನೇ ಇರಲಿ, ಆಳಿರಲಿ, ಹೆಣ್ಣಿರಲಿ, ಗಂಡಿರಲಿ, ಮಗುವಿರಲಿ, ಮುದುಕನಿರಲಿ,ಗುರುವಿರಲಿ, ಶಿಷ್ಯನಿರಲಿ ಕುಳಿತು ತಿನ್ನುವ ಹಕ್ಕಿಲ್ಲವೆಂದು ಸಾರಿದರು.ಅವರ ಈ ಮಾತಿನಲ್ಲಿ ಪ್ರತಿಯೊಬ್ಬರು ಸ್ವಾವಲಂಬಿಗಳಾಗಿ ಸುಖ ಜೀವನ ನಡೆಸಲು ಸಾಧ್ಯವಿದೆಯಲ್ಲದೆ ಅದರಿಂದ ಸುಖೀರಾಷ್ಟ ನಿರ್ಮಾಣವಾಗಬಲ್ಲದೆಂಬ ವಿಶಾಲ ಧೋರಣೆಯು ಅಡಗಿತ್ತು.

ಈ ಕಾಯಕ ಸಿದ್ಧಾಂತದಿಂದ ಸಮಾನತೆಯ ತತ್ವ ಅಳವಡಿಸಿಕೊಂಡರು. ಕಾಸಿಕಮ್ಮಾರನಾಗುವ, ಬೀಸಿ ಮಡಿವಾಳನಾಗುವ,ಹಾಸನಕ್ಕಿ ಸಾಲಿಗನಾಗುವ,ವೇದವನೊದಿ ಹಾರುವನಾಗುವ, ರೀತಿ ಜಾತಿಯಲ್ಲವೆಂದೂ, ಅದು ಕಾಯಕವೆಂದೂ ಅರ್ಥ ಮಾಡಿದರು. 'ಕಾರೆಯ ಸೊಪ್ಪಾದರೂ ಕಾಯಕದಿಂದ ಬಂದುದು ಲಿಂಗಾರ್ಪಿತ'–ವೆಂದು ಹೇಳಿದರು.ಏಳ್ನೂರೆಪ್ಪತ್ತು ಅಮರಗಣಂಗಳು ಕಾಯಕ ಕೈಕೊಂಡಿರುವುದರಿಂದ ಅಷ್ಟು ಕಾಯಕಗಳು ಪಾವಿತ್ರ್ಯತೆ ಪಡೆದವು. ದೊಡ್ಡ ಹುದ್ದೆ ಅಧಿಕಾರ ಬಯಸಿದವರು ಕೂಡಾ ದೊಡ್ಡ ಅಧಿಕಾರ ತ್ಯಜಿಸಿ ಸಾಮಾನ್ಯ ಕಾಯಕ ಕೈಗೊಂಡರು. ಮೊದಲು ಅರಸನಾಗಿದ್ದ ಮೋಳಿಗೆ ಮಾರಯ್ಯ ಕಲ್ಯಾಣದಲ್ಲಿ ಕಟ್ಟಿಗೆ ಮಾರುವ ಕಾಯಕವನ್ನು ಕೈಕೊಂಡರು.;ಅವರಿಗೆ ಮಾಡುವ ಕಾಯಕವು ದೊಡ್ಡದು ಸಣ್ಣದು ಎನಸಲಿಲ್ಲ.ಆ ಕಾಯಕದಲ್ಲಿ ತಮ್ಮ ಮನಸ್ಸು ಚಿಕ್ಕದಾಗಬಾರದೆಂಬುದೇ ಅವರ ನಲುವಾಗಿತ್ತು. ಹೀಗಾಗಿ ಚಿತ್ತ ಶುದ್ಧಿಯಿಂದ ಕಾಯಕ ಗೈದು ಕಲ್ಯಾಣರಾಷ್ಟ ಕಟ್ಟಿದರು.

ಹೀಗೆ ಅಮರಗಣಂಗಳಲ್ಲಿ ಎದ್ದು ಕಾಣುವುದು ಆತ್ಮಾಭಿಮಾನ. ಇದು ಮನುಷ್ಯನಲ್ಲಿ ಬರದ ಹೊರತು ಉನ್ನತ ವ್ಯಕ್ತಿತ್ವ ನಿರ್ಮಾಣಗೊಳ್ಳಲು ಸಾಧ್ಯವಿಲ್ಲ.ಸಾಮಾಜಿಕ ದಬ್ಬಾಳಿಕೆಯಿಂದಾಗಿಯೇ ಮಾನವ ತನ್ನೊಳಗಿನ ಆತ್ಮಾಭಿಮಾನವನ್ನು ಕಳೆದುಕೊಂಡು ಮೃಗನಾಗಿದ್ದ ಮನುಷ್ಯ ಮನುಷ್ಯನನ್ನು ತುಳಿದು ಒಬ್ಬನು ಮತ್ತೊಬ್ಬನನ್ನು ಕೀಳಾಗಿ ಕಾಣುತ್ತಿದ್ದ.ಇದರಿಂದ ಸಿಡಿದೆದ್ದರು 12ನೆಯ ಶತಮಾನದ ಅಮರಗಣಂಗಳು.ಒಳ್ಳೆಯದನ್ನು ಎತ್ತಿ ಹಿಡಿದು ಸಾಮಾಜಿಕ ಸಾಮರಸ್ಯಕ್ಕೆ ಧಕ್ಕೆಯಾಗುವ ವಿಷಯವನ್ನು ಖಂಡಿಸಿದರು.ಯಾರಿಗೂ ಕೈಚಾಚಿಲ್ಲ ಆಸೆ ಮಾಡಿಲ್ಲ "ಗೀತವ ಬಲ್ಲಾತ ಜಾಣನಲ್ಲ,ಮಾತು ಬಲ್ಲಾತ ಜಾಣನಲ್ಲ ಜಾಣನು ಜಾಣನು ಆತ ಜಾಣನು ಲಿಂಗದ ನೆರೆ ನಂಬಿದಾತ.ಜಾಣನು ಜಂಗಮಕ್ಕೆ ಸವೆಸುವಾತ" ಎಂದು ಹೇಳಿದರು. ಲಿಂಗವನ್ನು ನಂಬಿ ಜಂಗಮ ಅಂದರೆ ಸಕಲಜೀವ ಜಂತುಗಳ ಸೇವೆ ಮಾಡಿದವನು ಜಾಣನು' " – ದೀನ ಮಾನವನ ಸೇವೆಯೇ ದೇವರ ಸೇವೆ ಎಂಬುದನ್ನು ಅರಿತು ನಡೆದರು.

ಬಸವಣ್ಣನವರು ಬಿಜ್ಜಳನ ಮಂತ್ರಿಯಾಗಿರಬಹುದು, ಸಮಗಾರ ಹರಳಯ್ಯ ಚಪ್ಪಲಿ ಹೊಲಿದಿರಬಹುದು, ಆದರೆ ಇಬ್ಬರೂ ಒಂದಡೆ ಕುಳಿತು ಸಮಾನ ಮನಸ್ಕರಾಗಿ ವಿಚಾರ ಮಾಡಿದ್ದು ಗಮನಸುವಂತಹದಾಗಿದೆ. ಅಂತೆಯೆ

ಕಾಯಕದಲ್ಲಿ ನಿರತನಾದಡೆ ಗುರುದರ್ಶನವಾದರೂ ಮರೆಯಬೇಕು
ಲಿಂಗಪೂಜೆಯಾದರೂ ಮರೆಯಬೇಕು
ಜಂಗಮ ಮುಂದಿದ್ದಡೂ ಹಂಗು ಹರಿಯಬೇಕು

ಎಂದು ಕಾಯಕದ ಮಹತ್ವವನ್ನು ಒತ್ತಿ ಹೇಳಿದರು.ವಿಭೂತಿ ಮಾಡುವವರು, ಲಿಂಗ ಕಂತಿ ಕೂಡಿಸುವವರು,ಪತ್ರಿಹಾಕುವವರು,ಹೂ ಮಾರುವವರು,ಬಣ್ಣದವರು,ಚಪ್ಪಲಿ ಹೊಲಿವವರು, ತೊಗಲು ಹದಮಾಡುವವರು, ಕಿನ್ನರಿ ನುಡಿಸುವವರು, ದೋಣಿ ನಡೆಸುವವರು,ನೀರು ಹಾಕುವವರು, ಹುಗ್ಗಿ ಕುಟ್ಟುವವರು, ಕಟ್ಟಿಗೆ ಹಾಕುವವರು, ... ಗಡಿಗೆ ಮಾಡುವವರು, ಒಕ್ಕಲುತನ, ರತ್ನ ಮಾರುವವರು, ಬಂಗಾರ ಮಾಡುವವರು,ವೈದ್ಯರು, ಹಾಡುವವರು,ಆಕಳುಕಾಯುವವರು, ಅಕ್ಕಿ–ಬೇಳೆ ಆಯುವವರು, ನಸುಕಿನ ವೇಳೆ ಶರಣರನ್ನು ಎಬ್ಬಿಸುವವರು, ಹಗ್ಗ ಹೊಸೆಯುವವರು, ಕಂಬಳಿ ನೆಯುವವರು, ಕೋತಿ ಕುಣಿಸುವವರು ಹೀಗೆ ಕಾಯಕ ಜೀವಿಗಳಾದ ಅಮರ ಗಣಂಗಳಿಂದ ಕಲ್ಯಾಣ ಸಂಪದ್ಭರಿತವಾಗಿತ್ತು. ಆರ್ಥಿಕ ಪ್ರಗತಿ ಹೆಚ್ಚಾಯಿತು. ಬಡವರು, ಬಡತನ ಶಬ್ದ ಅಲ್ಲಿ ಇರಲಿಲ್ಲ. ಅದಕ್ಕಾಗಿಯೇ ಬಸವಣ್ಣನವರು 'ಬೇಡುವವರಿಲ್ಲದೆ ಬಡವನಾದೆನಯ್ಯಾ'–ಎಂದು ಉದ್ಗಾರ ತೆಗೆಯುತ್ತಾರೆ.

ದಾಸೋಹ ಸಂಪನ್ನರು :

ಅಮರಗಣಂಗಳು ದಾಸೋಹ ಸಂಪನ್ನರಾಗಿದ್ದರು, ನಿಷ್ಠೆಯಿಂದ ಕಾಯಕಗೈದು ನಿಜ ಮನಸ್ಸಿನಿಂದ ದಾಸೋಹಗೈದರು ತಾವುಗಳಿಸಿದ್ದನ್ನು ದಾಸೋಹ ರೂಪದಲ್ಲಿ ಸಮಾಜಕ್ಕೆ ಅರ್ಪಿಸಿದರು. ಕೂಡಿಟ್ಟು ಶ್ರೀ ಮಂತರೆನಿಸಿಕೊಳ್ಳಬೇಕೆನ್ನುವ ಹಪಾಹಪಿ ಅವರಲ್ಲಿರಲಿಲ್ಲ. ತಮ್ಮ ಕಾಯಕ–ದಾಸೋಹ ತತ್ವಗಳಿಂದಾಗಿ ಅವರು ಸಾಧಿಸಿದ ಆರ್ಥಿಕ ಸಮಾನತೆ ಇಂದು ಆಧುನಿಕರನ್ನು ಬೆರಗುಗೊಳಿಸುವಂತಹದ್ದಾಗಿದೆ.

ಅಹಂಕಾರನಿರಸನ ದಾಸೋಹತತ್ವದಲ್ಲಿ ಮುಖ್ಯವಾಗಿಸಿದರು. ಅಹಂಕಾರ ನಿರಸನಗೊಳಿಸಿ ತ್ರಿವಿಧಕ್ಕೆ ತ್ರಿವಿಧವನ್ನರ್ಪಿಸಿ ತ್ರಿವಿಧ ದಾಸೋಹಿಯಾಗಿದ್ದವರು ಅಮರ ಗಣಂಗಳು. ಕೇವಲ ಒಬ್ಬೊಬ್ಬರು ಮಾತ್ರ ದಾಸೋಹಿಯಾಗಲಿಲ್ಲ, ಎಲ್ಲರಿಗೂ ದಾಸೋಹ ಅನುಸಂಧಾನವನ್ನು ಕಲಿಸಿಕೊಟ್ಟಿರುವದರಿಂದ ಅಂದಿನ ನಾಡು ಕಲಾಣನಾಡಾಯಿತು. ಇಂದು ಸುಖಿರಾಜ ಕಟ್ಟಬೇಕೆಂದು ಯೋಚಿಸುವಂತಹವರಿಗೆ ಅಮರಗಣಂಗಳು ನಿದರ್ಶನರಾಗಿದ್ದಾರೆ. ವಿಶ್ವಬಂಧತ್ವದ ಸಂಕೇತವಾಗಿದೆ ಈ ದಾಸೋಹ ಸಿದ್ಧಾಂತ.

ಜಾತಿ –ಮತ ಭೇದ ಕಿತ್ತೊಗೆದವರು :

ಅಮರಗಣಂಗಳು ಸಾಧಿಸಿದ ಅದ್ಭುತ ಸಾಧನೆ ಮೂರು ಬಗೆಯಾಗಿವೆ. ಒಂದು ವರ್ಗಸಮಾನತೆ, ಇನ್ನೊಂದು ವರ್ಣಸಮಾನತೆ ಮತ್ತೊಂದು ಲಿಂಗ ಸಮಾನತೆ ಆರ್ಥಿಕ ಹಿನ್ನೆಲೆಯಲ್ಲಿ ವರ್ಗಸಮಾನತೆಗೈದರೆ, ಜಾತಿ ಹಿನ್ನೆಲೆಯಲ್ಲಿ ವರ್ಣಸಮಾನತೆ, ಹೆಣ್ಣು ಗಂಡು ಇವುಗಳ ಹಿನ್ನೆಲೆಯಲ್ಲಿ ಲಿಂಗಸಮಾನತೆ– ಇವು ಗಣಂಗಳ ಮುಖ್ಯ ವೈಶಿಷ್ಟ್ಯವಾಗಿವೆ. ಅಮರಗಣಂಗಳು ಹದಿನೆಂಟು ಜಾತಿಯಿಂದ ಬಂದವರಾಗಿದ್ದರೂ, ಅಮರಗಣಂಗಳು ಒಪ್ಪಿಕೊಂಡ ಕುಲಗಳು ಎರಡು ಮಾತ್ರ ಒಂದು ಭಕ್ತ ಕುಲ ಇನ್ನೊಂದು ಭವಿಕುಲ. ಭವಿಗಳಾದವರು ಭಕ್ತರಾಗಬೇಕೆನ್ನುವ ಸದುದ್ದೇಶ ಉಳ್ಳವರು. ಅಲ್ಲದೆ ಅಸಂಖ್ಯಾತ ಭವಿಗಳನ್ನು ಭಕ್ತರನ್ನಾಗಿಸಿ ಅವರಿಗೆ ಜಂಗಮತ್ವದ ಸ್ಥಿತಿಯ ಮಟ್ಟಕ್ಕೆ ಒಯ್ದರು 'ಕೊಲ್ಲುವನು ಮಾದಿಗ ಹೊಲಸು ತಿಂಬುವನು ಹೊಲೆಯ'– ಎಂದು ಎಚ್ಚರಿಸಿದರು, 'ಆಚಾರವೇ ಕುಲ, ಅನಾಚಾರವೆ ಹೊಲೆ' ಎನ್ನುತ್ತಾ ಆ ಉಭಯವನ್ನು ತಿಳಿದು ನಡೆದರು.

ಅಮರಗಣಂಗಳು ಗೈದ ಈ ದೊಡ್ಡ ಕ್ರಾಂತಿ ಇತಿಹಾಸ ಪುಟದಲ್ಲಿ ಚಿರಸ್ಮರಣೆಯಾಗಿದೆ ಯಾರೂ ಸಮಾಜದಿಂದ ತಿರಸ್ಕರಿಸಲ್ಪಟ್ಟವರಾಗಿದ್ದರೋ, ಅಂತಹ ಜನರೆ ಅನುಭವಮಂಟಪದಲ್ಲಿ ಕುಳಿತು ಆಧ್ಯಾತ್ಮಿಕ ವಿಷಯ ಚರ್ಚೆಮಾಡಿದ್ದು ಸೋಜಿಗದ ವಿಷಯ–

'ಸೆಟ್ಟಿಯೆಂಬೆನೆ ಸಿರಿಯಾಳನ ?<br>
ಮಡಿವಾಳನೆಂಬೆನೆ ಮಾಚಯ್ಯನ ?<br>
ಡೋಹಾರನೆಂಬೆನೆ ಕಕ್ಕಯ್ಯನ ?<br>
ಮಾದಾರನೆಂಬೆನೆ ಚನ್ನಯ್ಯನ ?<br>
ಆನು ಹಾರುವನೆಂದರೆ ಕೂಡಲಸಂಗಯ್ಯ ನಗುವನಯ್ಯ

ಎಂದು ಹೇಳುತ್ತಾ ಬಸವಣ್ಣನವರು ಉಳಿದ ಅಮರಗಣಂಗಳ ಆತ್ಮ ವಿಶ್ವಾಸ ಹೆಚ್ಚಿಸಿದರು. ಹೀಗಾಗಿ ಅದೆಷ್ಟೋ ಜನರು ಜಾಗೃತರಾಗಿ ಸಮಾಜದ ವಿರುದ್ಧ ಸಿಡಿದೆದ್ದರು. ಸದ್ಗುಣಗಳನ್ನು ಬೆಳೆಯಿಸಿಕೊಂಡು ಕಲ್ಯಾಣರಾಷ್ಟ್ರ ಕಟ್ಟಬೇಕೆನ್ನುವ ಹಿರಿದಾಸೆಯಿಂದ ಕಾರ್ಯಶೀಲರಾದರು. ಶತ–ಶತ ಮಾನಗಳಿಂದ ತಮಗಂಟಿಕೊಂಡಿದ್ದ ಮೌಢ್ಯಗಳನ್ನೆಲ್ಲಾ ಕಲ್ಯಾಣದಲ್ಲಿ ಅಂದು ಕಿತ್ತೊಗೆದರು. ತಾವುಮಾನವರೆ ನಮಗೂ ಜೀವವಿದೆ, ಭಾವನೆಗಳಿವೆ ಎಂದು ಸಾರಿದರು. ಹಾವಿನಹಾಳ ಕಲ್ಲಯ್ಯನವರು ತಮ್ಮ ವಚನೊಂದರಲ್ಲಿ,'ಬ್ರಾಹ್ಮಣ ಮೊದಲಾಗಿ ಶ್ವಪಚ ಕಡೆಯಾಗಿ ಎಲ್ಲರಿಗೆಯೂ ಜನನವೊಂದೆ, ಆಹಾರ, ನಿದ್ರೆ ಭಯ,ಮೈಥುನವೊಂದೆ ಪುಣ್ಯಪಾಪವೊಂದೆ ಸ್ವರ್ಗ ನರಕವೊಂದೆ' ಎಂದು ಹೇಳಿದ್ದಾರೆ.

ಹೀಗೆ ಅಮರಗಣಂಗಳು ತಾವು ಯಾವ ಜಾತಿ, ಕುಲದಿಂದ ಬಂದಿವೆಂಬುದನ್ನು ಮರೆತು, ಮತಾಂಧತ್ವವನ್ನು ಧಿಕ್ಕರಿಸಿದರು. ಜ್ಯಾತ್ಯಾತೀತ ಸಮಾಜ ಕಟ್ಟುವಲ್ಲಿ ಯಶಸ್ವಿಯಾದರು.

**ಮೂಢ ನಂಬಿಕೆಗಳನ್ನು ಧಿಕ್ಕರಿಸಿದವರು** :

ಅಮರಗಣಂಗಳು ತಮಗೆ ಸಮ್ಮತವಲ್ಲದುದನ್ನು ರಾಜಾರೋಷವಾಗಿ ಖಂಡಿಸಿದವರು. ಯಜ್ಞ ಯಾಗಾದಿಗಳನ್ನು ಖಂಡಿಸಿ ಅನೇಕ ದೇವತಾರಾಧನೆಗಳನ್ನು ತೊಡೆದು ಹಾಕಿ ಅದು ಪೂಜೆಯಲ್ಲ, ಧರ್ಮವಲ್ಲ, ಕರ್ಮಠತನ ಎಂಬುದನ್ನು ಸಾರಿ ಸಾರಿ ಹೇಳಿದರು. ಭಕ್ತಿ ಆಡಂಬರದ ವಿಷಯವಲ್ಲ ಅದು ಅನುಭವದ ವಿಷಯವೆಂದು ಹೇಳಿದರು. ಕಲ್ಲು ಮಣ್ಣು, ಮಡಕೆ ದೇವರೆಂದು ಭಾವಿಸಿ ಪೂಜಿಸುವದು ವಿರೋಧಿಸಿದರು.

ಭೈರವನನಾರಾಧಿಸಿ ಬಾಹಿರರಾದರಯ್ಯಾ<br>
ಮೈಲಾರರನಾರಾಧಿಸಿ ಕುರುಳು ಬೆರಳ ಕಡಿಸಿಕೊಂಡು<br>
ನಾಯಾಗಿ ಬೊಗಳುತ್ತಿಪ್ಪರಯ್ಯಾ

ಎಂದು ಕೇಳಿ ಹತ್ತು ಹಲವು ದೈವಗಳನ್ನು ಕಲ್ಪಿಸಿಕೊಂಡು ಪೂಜಿಸುವದರಿಂದ ನಿಜ ಮುಕ್ತಿ ಸಿಗುವಂತಿಲ್ಲವೆನ್ನುತ್ತಾರೆ.

ಸೋಮವಾರ ಮಂಗಳವಾರ ಶಿವರಾತ್ರಿಯಂದು<br>
ಸೋಮವಾರ ಮಂಗಳವಾರ ಶಿವರಾತ್ರಿಯಂದು<br>
ಲಿಂಗಭಕ್ತಂಗೆ ಎಂತು ಸರಿಯೆಂಬೆನಯ್ಯ<br>
ದಿನ ಶ್ರೇಷ್ಟವೋ ಲಿಂಣಶ್ರೇಷ್ಟವೋ

ಎಂದು ಪಂಚಾಂಗ ಹೇಳುವವರಿಗೆ ಧೈರ್ಯದಿಂದ ಪ್ರಶ್ನಿಸಿದರು. ವಿಪ್ರರಿಗೆ ಕಾಣಿಕೆಯಿಟ್ಟು ಸೂರ್ಯಬಲ ಚಂದ್ರ ಬಲ ಕೇಳುವವರಿಗೆ ಭಕ್ತಿಯೇ ಇಲ್ಲ ಎಂಬುದು ಅವರ ನಿರ್ಣಯವಾಗಿತ್ತು ಆದ್ದರಿಂದ ಅಮರ ಗಣಂಗಳು ವಾರ,ತಿಥಿ, ನಕ್ಷತ್ರ ಎಲ್ಲವನ್ನು ಖಂಡಿಸಿ 'ಬಾರದು ಬಪ್ಪದು, ಬಪ್ಪದು–ತಪ್ಪದು,' ಎಂಬುದರಲ್ಲಿ ವಿಶ್ವಾಸವನಿಟ್ಟು ನಡೆದರು. 'ಶರಣನಿದ್ರೆಗೈದಡೆ ಜಪ ಕಾಣಿರೋ, ಶರಣ ಎದ್ದು ಕುಳಿತರೆ ಶಿವರಾತ್ರಿ ಕಾಣಿರೋ' ಎಂಬುದು ಅವರ ವಾಸ್ತವ ಸ್ಥಿತಿಯಾಗಿತ್ತು. ಹೀಗೆ ಯಜ್ಞ ಯಾಗಾದಿಗಳನ್ನು ಅವುಗಳ ಹೆಸರಿನಲ್ಲಿ ನಡೆಯುವ ಪ್ರಾಣಿ ಬಲಿಯನ್ನು ಹತ್ತು ಹಲವಾರು ರೀತಿಯಲ್ಲಿ ದೇವರನ್ನು ಪೂಜಿಸುವ ರೀತಿಯನ್ನು ಪಂಚಾಂಗ, ಜೋತಿಷ್ಯ, ಎಲ್ಲವನ್ನು ಕೇಳಬಾರದೆಂಬುದೆ ಅವರ ಮುಖ್ಯ ವಿಚಾರವಾಗಿತ್ತು.

**ಏಕದೇವೋಪಾಸಕರು**

ದೇವರು ಇರುವಿಕೆಯನ್ನು ಒಪ್ಪಿಕೊಂಡ ಅಮರ ಗಣಂಗಳು ಮೊದಲು ಇಷ್ಟಲಿಂಗವನ್ನು ಎದೆಯ ಮೇಲೆ ಧರಿಸಿದರು. ಅವರಲ್ಲಿ ಪ್ರತಿಯೊಬ್ಬರು ಲಿಂಗಧಾರಣೆ ಮಾಡಿದವರೆ ಆಗಿದ್ದಾರೆ. ತಮ್ಮ ಲಿಂಗದ ಹೊರತು ಅವರು ಇನ್ನೊಂದನ್ನು ಪೂಜಿಸಲಿಲ್ಲ.

ಉಳ್ಳವರು ಶಿವಾಲಯ ಮಾಡುವರು<br>
ನಾನೇನು ಮಾಡಲಿ ಬಡವನಯ್ಯ<br>
ಎನ್ನ ಕಾಲೆ ಕಂಭ, ದೇಹವೇ ದೇಗುಲ<br>
ಎನ್ನ ಶಿರವೇ ಹೊನ್ನ ಕಳಸವಯ್ಯ<br>
ಕೂಡಲ ಸಂಗಮದೇವಾ ಕೇಳಯ್ಯಾ<br>
ಸ್ಥಾವರಕ್ಕಳಿಉಂಟು ಜಂಗಮಕ್ಕಳಿವಿಲ್ಲ

ಹೀಗೆ ದೇಹವನ್ನೆ ದೇಗುಲ ಮಾಡಿ ಆತ್ಮವನ್ನು ದೇವರನ್ನಾಗಿಸುವ ಪರಮ ಧರ್ಮವನ್ನು ಅವಿಷ್ಕಾರ ಮಾಡಿದರು. ಸಮಾನತೆ ತತ್ವ ಬೆಳೆಸುವಲ್ಲಿ ಅಮರ ಗಣಂಗಳಿಗೆ ಲಿಂಗದ ಕಲ್ಪನೆ ಸಾಧನವಾಯಿತು.

'ಅಂಗದ ಮೇಲೆ ಲಿಂಗವಿದ್ದರೆ' ಸಂಗಮನಾಥನೆಂಬೆ ಎನ್ನುತ್ತಾ ಬಸವಣ್ಣನವರು ಪ್ರತಿಯೊಬ್ಬರು ಲಿಂಗವನ್ನು ಧರಿಸಲು ಪ್ರೇರೆಪಿಸಿದರು. ಈ ಲಿಂಗಧಾರಣದಿಂದ ಒಂದು ಮಹತ್ತರವಾದ ಶಿವಯೋಗವನ್ನು ಕಂಡು ಅದರ ಅನುಭವನ್ನು ಸಾಮಾನ್ಯ ಜನರಿಗೆ ಮನವರಿಕೆಯಾಗುವಂತೆ ಮಾಡಿದ್ದು ಇವರ ವೈಶಿಷ್ಟ್ಯವಾಗಿದೆ.

ಅಮರ ಗಣಂಗಳ ಆಧ್ಯಾತ್ಮ ಸಾಧನೆಗೆ ಇಷ್ಟಲಿಂಗ ಸಾಧನೆಯಾಯಿತು. ಅದು ಅವರೊಳಗಿರುವ ಕೀಳರಿಮೆ ಅಳಿಸಿ ಹಾಕುವ ಕೇಂದ್ರ ಶಕ್ತಿಯಾಯಿತು. ಅಷ್ಟೆಯಲ್ಲದೆ ತಾವೆಲ್ಲರೂ ಒಂದೆ ಎಂಬ ಭಾವನೆ ಬಲಿಯಿತು. ಇದರಿಂದ ಅನೇಕ ಜಾತಿಯ ಜನರು ಒಂದು ಕಡೆ ನೆಲೆನಿಲ್ಲಲು ಸಾಧ್ಯವಾಯಿತು. ತಮ್ಮ ದೇಹದ ಮೇಲೆ ಲಿಂಗವನ್ನು ಸ್ಥಾಪಿಸಿಕೊಂಡು ತಾವೇ ದೇವರಾದರು. ಲಿಂಗ ಮುಟ್ಟಿದ ಬಳಿಕ ಕೂಚಿತ್ತ, ಆಚಾರ ಮಾಡಬಾರದೆಂದು ಹೇಳಿದರು. ಲಿಂಗ ಧರಿಸಿದ ಮೇಲೆ ಒಳಗೊಂದು ಹೊರಗೊಂದು ಅವರು ಮಾಡಲಿಲ್ಲ. ಲಿಂಗ ಕಟ್ಟಿ ಕೊಂಡ ಇವರು ಲಿಂಗದಂತೆ ನಡೆದರು. ಹೀಗೆ ಲಿಂಗಪೂಜೆಯ ಮೂಖಾಂತರ ತಮ್ಮ ಆತ್ಮೋದ್ಧಾರ ಮಾಡಿಕೊಂಡರು.

ಜಂಗಮ ಪ್ರೇಮಿಗಳು

'ಛಲಬೇಕು ಶರಣಂಗೆ ಲಿಂಗ ಜಂಗಮ ಒಂದೆಯೆಂಬೆ' ಎಂಬ ತತ್ವ ಸಿದ್ಧಾಂತ ಅಮರ ಗಣಂಗಳದು ಅವರ ಪಾಲಿಗೆ ಜಂಗಮವೆಂದರೆ ಸಮಾಜ. ಆ ಜಂಗಮರ ಸಮಾಜ ಸೇವೆಯೇ ದೇವರ ಸೇವೆಯಂದು ಭಾವಿಸಿದ್ದರು. ತಾವು ಕೈಕೊಳ್ಳುವ ಕ್ರಿಯೆಗಳೆಲ್ಲವೂ ಲಿಂಗಾಭಿಮುಖವಾಗಿ ನಡೆದರೆ ಪೂಜೆಯಾಗುತ್ತದೆಂದು, ಜಂಗಮಾಭಿಮುಖವಾಗಿ ನಡೆದರೆ ದಾಸೋಹವಾಗುತ್ತದೆಂಬುವದು ಅವರ ತಿಳುವಳಿಕೆಯಾಗಿತ್ತು ಅದಕ್ಕಾಗಿಯೇ ಬಸವಣ್ಣನವರು ಜಂಗಮಕ್ಕೆರೆದರೆ ಸ್ಥಾವರನೆನೆಯಿತ್ತು. ಎಂದು ಹೇಳಿದ್ದಾರೆ.

ಜಂಗಮ ಎಂಬ ಶಬ್ದಕ್ಕೆ ಅವರು ವಿಶಿಷ್ಟ ಅರ್ಥ ಕೊಟ್ಟರು. ಕಾವಿ, ಕಪಿನಿ, ಧರಿಸಿದವರು, ಆವುಗೆ ಮೆಟ್ಟಿದವರು, ಜುಟ್ಟ ಕಟ್ಟಿದವರನ್ನು ಅವರು ಜಂಗಮ ಎನ್ನಲಿಲ್ಲ. ಗಾಂಧೀಜಿಯವರು ದರಿದ್ರನೇ ನಾರಾಯಣ ಎಂದು ಹೇಳಿದಂತೆ ದೀನರು, ದುಃಖಿಗಳು, ದಲಿತರು, ಬಡವರು ಒಟ್ಟಾರೆ ಸಮಾಜದಿಂದ ತಿರಸ್ಕರಿಸಲ್ಪಟ್ಟವರನ್ನು ಬಸವಣ್ಣನವರು ಜಂಗಮರೆಂದೆ ಕಂಡರು. ಅವರನ್ನು ಸತ್ ಕ್ರಿಯೆಗಳಿಗೆ ಹಚ್ಚಿ ಲಿಂಗಧಾರಣೆಮಾಡಿ, ಆತ್ಮಸ್ಥೈರ್ಯ ತುಂಬಿ ಜಂಗಮರನ್ನಾಗಿಸಿದರು. ಅವರ ಮಹಾಮನೆಯಲ್ಲಿ ಲಕ್ಷದ ಮೇಲೆ ತೊಂಬತ್ತಾರು ಸಾವಿರ ಜಂಗಮರಿಗೆ ನಿತ್ಯ ದಾಸೋಹ ನಡೆಯುತ್ತಿತ್ತು. ಇಂತಹ ಜಂಗಮರ ಪ್ರೇಮಿಗಳು ಅಮರ ಗಣಂಗಳು. ಜಂಗಮರ ಸೇವೆಯಿಲ್ಲದೆ ಯಾವುದು ಎಷ್ಟೇ ಮಾಡಿದರು ಅರ್ಥಹೀನ ಎಂಬ ತಿಳುವಳಿಕೆಯುಳ್ಳ ಇವರು ಮಾಡಿದರೆ ಜಂಗಮರಿಗೆ ಮಾಡಬೇಕೆಂದು ಹೇಳಿ ಹಾಗೆ ನಡೆದುಕೊಂಡರು ಇದರಿಂದ ಸಮಾಜ ಸುಸ್ಥಿತಿಗೆ ಬರುತ್ತದೆ ಎಂಬುದು ಅವರ ಕಲ್ಪನೆಯಾಗಿತ್ತು.

**ಪ್ರಸಾದದಲ್ಲಿ ಪಾವಿತ್ರ್ಯತೆ ಕಂಡವರು** :

ಬದುಕಿದ ಪ್ರತಿಯೊಂದು ಜೀವಿಗೂ ಅನ್ನ, ನೀರುಗಳ ಅವಶ್ಯಕತೆ ಇದೆ, ಅನ್ನವಿಲ್ಲದೆ ಬದುಕುವಂತಿಲ್ಲ ಅಂತಹ ಅನ್ನವನ್ನೆ ಪ್ರಸಾದವೆಂದು ಬಗೆದವರು. ಅವರು ಈ ಪ್ರಕೃತಿ ಪರಮಾತ್ಮ ಜೀವಿಗಳಿಗೆ ಕೊಟ್ಟ ದಾನ. ಇಲ್ಲಿರುವದನ್ನು ಪ್ರತಿಯೊಬ್ಬರು ಹಂಚಿಕೊಂಡು ತಿನ್ನಬೇಕೆಂದು ಹೇಳಿದರು.

ಪರಶಿವ ಕೊಟ್ಟ ಅಂತಹ ಪ್ರಸಾದವನ್ನು ಬಹಳ ಪವಿತ್ರ ಮನೋಭಾವದಿಂದ ಕಂಡರು. ಪವಿತ್ರವಾದ ಆ ಪ್ರಸಾದವನ್ನು ಬೀಸಾಡಬಾರದೆಂದು ಹೇಳಿದರು. ಬೇಕಾದುದಕ್ಕಿಂತ ಹೆಚ್ಚಿಗೆ ಹಾಕಿಕೊಂಡು ತಿಂದು ಉಳಿದುದನ್ನು ಚಲ್ಲಬಾರದು ಎನ್ನುತ್ತಾರೆ. ಶುದ್ಧ, ಸಾತ್ವಿಕ ಆಹಾರವನ್ನು ಸ್ವೀಕರಿಸಬೇಕು, ಒಂದೊಂದು ಅಗುಳು ಸಹ ಬೆಲೆಯುಳ್ಳದಾಗಿರುತ್ತದೆ, ಜೀವಕಳೆಯಿಂದ ಕೂಡಿರುತ್ತದೆ. ಶುದ್ಧ ಮನಸ್ಸಿನಿಂದ ಆಹಾರ ಪಡೆದಿದದ್ದೆ ಆದರೆ ಶರೀರ ಮತ್ತು ಮನಸ್ಸುಗಳೆರಡು ಉತ್ತಮ ಸ್ಥಿತಿಯಲ್ಲಿ ಇರುತವೆ ಎಂದು ಹೇಳಿದರು.

ಮೌನದಲುಂಬುದು ಆಚಾರವಲ್ಲ

ಲಿಂಗಾರ್ಪಿತ ಮಾಡಿದ ಬಳಿಕ
ತುತ್ತಿಗೊಮ್ಮೆ ಶಿವಶರಣ ಎನ್ನುತ್ತಿರಬೇಕು.
ಕರಣ ವೃತ್ತಿಗಳಡಗುವವು ಕೂಡಲ ಸಂಗನ
ನೆನೆಯುತ್ತಾ ಉಚಿಡರೆ

ಪ್ರಸಾದದಿಂದ ಕರಣವೃತ್ತಿಗಳು ಅಡಗಿ ಕಾಯ ಪ್ರಸಾದಕಾಯವಾಗುತ್ತದೆ. ಅದಕ್ಕಾಗಿ ಅವರು ಜಾಗುರಕರಾಗಿದ್ದರು.

**ಪರಸ್ತ್ರೀಯರನ್ನು ಹೆತ್ತತಾಯಿಯಂತೆ ಕಂಡವರು.** :

ಅಮರ ಗಣಂಗಳು ಸ್ತ್ರೀಯರಿಗೆ ಭಕ್ತಿಯಿಂದ ಗೌರವದಿಂದ ಕಂಡವರು. ಅವರು ಹಾಗೆ ಕಂಡಿರುವದರಿಂದಲೇ ಸ್ತ್ರೀಯರು ಕೂಡಾ ಗಣಂಗಳಲ್ಲಿ ಸ್ಥಾನ ಪಡೆಯಲು ಸಾಧ್ಯವಾಯಿತು. ಪುರುಷನು ಪಡೆಯುವ ಎಲ್ಲಾ ಹಕ್ಕುಗಳು ಮಹಿಳೆಯು ಪಡೆಯಬಹುದಾಗಿದೆ ಎಂದು ಸಾರಿದರು. ಆತ್ಮದ ಕಲ್ಪನೆಯ ಮೂಲಕ ಮಹಿಳೆಯನ್ನು ಪುರುಷರಷ್ಟೆ ಉನ್ನತ ಸ್ಥಾನಕ್ಕೆ ಒಯ್ದು ನಿಲ್ಲಿಸಿದ್ದು ಅವರ ವಿಶಾಲ ಮನೋಭಾವನೆಗೆ ಉತ್ತಮ ನಿದರ್ಶನವಾಗಿದೆ.

**ಪರರದ್ದನ್ನು ಮುಟ್ಟಬಾರದು:**

'ಛಲಬೇಕು ಶರಣಂಗೆ ಪರಧನವನೊಲ್ಲೆನೆಂಬ' ಇದು ಅಮರ ಗಣಂಗಳ ಮುಖ್ಯ ಗುರಿಯಾಗಿತ್ತು ಉರಿಯೇ ಬರಲಿ ಸಿರಿಯೇ ಬರಲಿ ಯಾರ ಮುಂದೆ ಕೈ ಚಾಚದೆ ಇನ್ನೊಬ್ಬರದನ್ನು ಕದ್ದು ತಿನ್ನಬಾರದೆಂದು ಹೇಳಿದರು. ಹಾಗೆ ಬದುಕಿದರು. ತಾವು ನಂಬಿದ ಕಾಯಕದಲ್ಲಿ ಏಕನಿಷ್ಠೆ ಉಳ್ಳವರಾಗಿರುವದರಿಂದ ಯಾರದಕ್ಕೂ ಕೈ ಹಚ್ಚಲಿಲ್ಲ. ಕಾಡಿ ಬೇಡಿ, ಪಡೆಯಲಿಲ್ಲ. ಬಸವಣ್ಣನವರು

ಊರ ಮುಂದೆ ಹಾಲ ಹಳ್ಳ ಹರಿಯಲು
ಒರೆಯಾವಿನ ಬೆನ್ನು ಹತ್ತಲೇಕಯ್ಯಾ
ಲಜ್ಜೆಗೆಡಲೇಕೆ ? ನಾಣು ಗೆಡಲೇಕೆ ?
ಕೂಡಲಸಂಗಮ ದೇವರನುಳ್ಳನಕರ

ಬಿಜ್ಜಳನ ಭಂಡಾರ ಎನಗೇಕಯ್ಯಾ – ಎಂದು ಪ್ರಶ್ನಿಸಿದರು. ಪಾಪದಿಂದ ಗಳಿಸಿದ ಹಣ ನಾಯಿಯ ಹಾಲಿನಂತೆ. ಅದರಿಂದ ದಾಸೋಹ ಮಾಡಬಾರದೆಂದು ಹೇಳಿದರು

**ಅರಿಷಡ್ವರ್ಗಗಳನ್ನು ಮೀರಿದವರು** :

ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರಗಳನ್ನು ಮೀರಿ ನಿಂತವರು. ಅವರ ನಡೆದ ದಾರಿಯಾಗಲಿ, ಇನ್ನೊಬ್ಬರಿಗೆ ತೋರಿಸಿಕೊಟ್ಟ ಮಾರ್ಗವಾಗಲಿ ನೇರವೂ ಸ್ಪಷ್ಟವು ಆಗಿತ್ತು. ತಾವು ನೈತಿಕ ಮಾರ್ಗದಲ್ಲಿ ನಡೆದರಲ್ಲದೆ ಹಾಗೆ ನಡೆಯಲು ಹೇಳಿದರು. ಅಂತರಂಗದ ಶುಚಿತ್ವ ಎಲ್ಲ ಪ್ರಗತಿಗೆ ಮೂಲ ಕಾರಣ ಸದಾಚಾರ ಮಾನವನಿಗೆ ಮೂಲಭೂತವಾದದ್ದು ಮಾನವನ ಬದುಕಿನ ಅಂತಿಮ ಸತ್ಯವಿರುವದು ಅದರಲ್ಲಿಯೇ ಎಂದು ಒತ್ತಿ ಹೇಳಿದರು. ಸದಾಚಾರಿಯಲ್ಲದ ಅಳಿಮನದವನಿಗೆ ದೀಕ್ಷೆಯ ಕೊಟ್ಟರೆ ಕುಂಬಳಕಾಯಿಗೆ ಕಾವು ಕೊಟ್ಟಂತೆ. ಸೆಗಣಿಯ ಬೆನಕಂಗೆ ಸಂಪಿಗೆಯೆರಳಲ್ಲಿ ಪೂಜಿಸಿದಂತೆ. ಅಂತವರು ಭೂಮಿಗೆ ಭಾರ ಎನ್ನುತ್ತಾರೆ.

**ಅಷ್ಟಾವರಣೆಗಳು** :

ಇವರು ಅಷ್ಟಾವರಣಗಲ್ಲಿ ನಂಬಿಕೆ ಇಟ್ಟವರು ಗುರು, ಲಿಂಗ, ಜಂಗಮ, ವಿಭೂತಿ, ರುದ್ರಾಕ್ಷಿ ಮಂತ್ರ, ಪಾದೋದಕ, ಪ್ರಸಾದ ಇವು ಅಷ್ಟಾವರಣಗಳು. ಇವುಗಳಲ್ಲಿ ಗುರು, ಲಿಂಗ, ಜಂಗಮ ಪೂಜಿಸಲ್ಪಡುವವರು ವಿಭೂತಿ, ರುದ್ರಾಕ್ಷಿ ಪೂಜಿಸುವ ವಸ್ತುಗಳು. ಪಾದೋದಕ ಪ್ರಸಾದ ಪೂಜೆಯಿಂದ ಪಡೆದ ವಸ್ತುಗಳು. ಅಮರಗಣಂಗಳು ಚೈತನ್ಯ ರೂಪವಾಗಿರುವ ಗುರು, ಲಿಂಗ, ಜಂಗಮರನ್ನು ಪೂಜಿಸಿದರೆ ಹೊರತು ಅನ್ಯ ದೈವಕಲ್ಲ ಹಣೆಯಮೇಲೆ ವಿಭೂತಿ ಬಾಯಿಯಲ್ಲಿ ಮಂತ್ರ, ಕೊರಳಲ್ಲಿ ರುದ್ರಾಕ್ಷಿ ಇವು ಅವರ ಸೌಂದರ್ಯದ ವಸ್ತುಗಳು. ಇವು ಅವರಿಗೆ ಜಾತಿಯ ಕುರುಹಾಗಿ ಕಾಡಲಿಲ್ಲ ಮೇಲಾಗಿ ಶುಚಿತ್ವ, ಸಮಾನತೆಯ ಬದುಕು ಸಾಗಿಸಲು ಮುಖ್ಯವಾದವು. ಆಡಂಬರ ಪೂಜೆ ಅವರು ಒಪ್ಪಲಿಲ್ಲ. ಶಿವನು ನಾದಪ್ರಿಯನಲ್ಲ, ವೇದಪ್ರಿಯನಲ್ಲ, ಭಕ್ತಿಪ್ರಿಯವೆಂದು ಹೇಳಿ ಪೂಜೆಯಲ್ಲಿ ಸರಳತೆಯನ್ನು ತಂದರು.

**ಷಟ್ಸ್ಥಲ ಸಂಪ್ಪನ್ನರು:**

ಅಮರಗಣಂಗಳು ಷಟ್ಸ್ಥಲ ಸಂಪನ್ನರಾಗಿದ್ದರು. ತಮ್ಮ ನಿರಂತರ ಸಾಧನೆಯಿಂದ ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಸ್ಥಲಕ್ಕೆ ಏರಿದರು. ಅಮರಗಣಂಗಳು ವಿವಿಧ ವೃತ್ತಿಯನ್ನು ಕೈಕೊಂಡವರಾಗಿದ್ದರೂ ಕೂಡಾ ಎಲ್ಲರೂ ತಮ್ಮ ವೃತ್ತಿಯಲ್ಲಿಯಿದ್ದುಕೊಂಡು ಷಟ್ಸ್ಥಲ ಮಾರ್ಗವನ್ನು ಅನುಸರಿಸಿದರು. ಭಕ್ತಿಯೆಂಬುದನ್ನು ಮುಖ್ಯವಾಗಿಸಿಕೊಂಡು ಹೊರಟವರು. ತಮ್ಮ ಜೀವನವನ್ನು ವಿಕಾಸ ಮಾರ್ಗದತ್ತ ಕೊಂಡ್ಯೊಯಲು ಭಕ್ತಿಯೆಂಬ ಪಥವ ಹಿಡಿದು ಹೊರಟರು, ಇಲ್ಲಿ ಎಚ್ಚೆತ್ತುಕೊಂಡು ಒಂದೊಂದೇ ಸ್ಥಲಗಳನ್ನು ಹತ್ತುತ್ತಾ ಅಮರರಾದರು.

**ಪಂಚಾಚಾರಿಗಳು:**

ಲಿಂಗಾಚಾರ, ಸದಾಚಾರ, ಶಿವಾಚಾರ, ಭೃತ್ಯಾಚಾರ, ಗಣಾಚಾರ– ಈ ಐದು ಪಂಚಾಚಾರಗಳನ್ನು ಹಿಡಿದು ಹೊರಟವರು. ಇವು ಅವರಿಗೆ ಪ್ರಾಣಗಳಾಗಿದ್ದವು. ತಾವು ಇವುಗಳನ್ನು ಆಚರಿಸಿದ್ದರಲ್ಲದೆ ಇವುಗಳನ್ನು ಹಿಡಿದು ಪ್ರತಿಯೊಬ್ಬರು ಹೇಗೆ ವರ್ತಿಸಬೇಕೆಂಬುದು ತಿಳಿಸಿಕೊಟ್ಟರು. ಇಷ್ಟಲಿಂಗವಲ್ಲದೆ ಮತ್ತೊಂದಕ್ಕೆರೆಗೆನು ಎಂಬುದು ಲಿಂಗಾಚಾರದ ನಿಯಮವಾದರೆ, ಒಳ್ಳೆಯ ಮಾರ್ಗದಲ್ಲಿ ನಡೆಯಬೇಕು ಎಂಬುದು ಸದಾಚಾರ ನಿಯಮ. ಶಿವಭಕ್ತರೆಲ್ಲರೂ ಒಂದೇ ಎಂಬುದು ಶಿವಾಚಾರವಾದರೆ, ಶಿವಶರಣರು ಹಿರಿಯರು, ತಾನು ಕಿರಿಯ ಎಂಬ ಭಯಭಕ್ತಿ ಭೃತ್ಯಾಚಾರ, ಶಿವನಿಂದೆ,ಯನ್ನು ಕೇಳದಿರುವುದೆ ಗಣಾಚಾರ. ಇಂತಹ ಆಚಾರಗಳನ್ನು ಅಳವಡಿಸಿಕೊಂಡು ಅವರು ಸ್ವಾಭಿಮಾನಿಗಳಾಗಿ ಬದುಕಿದವರು.

**ಸ್ತ್ರೀಕುಲಕ್ಕೆ ಸ್ವಾತಂತ್ರ್ಯ ಕೊಟ್ಟವರು**

ಅಮರಗಣಂಗಳು ಮಾಡಿದ್ದ ಅದ್ಬುತ ಸಾಧನೆಯೆಂದರೆ ಸ್ತ್ರೀಯರಿಗೆ ಸ್ವಾತಂತ್ರ್ಯ ಕಲ್ಪಿಸಿದರು, ಸ್ತ್ರೀಯರ ಬಗ್ಗೆ ಇದ್ದ ಅಭಿಪ್ರಾಯಗಳನ್ನೆಲ್ಲ ಶರಣರು ತಿರಸ್ಕರಿಸಿದರು. ಪುರುಷರಂತೆ ಅವರಿಗೂ ಎಲ್ಲಾ ರೀತಿಯ ಅವಕಾಶಗಳನ್ನು ಕಲ್ಪಿಸಿಕೊಟ್ಟರು. ಅಂತೆಯೇ ಅಮರಗಣಂಗಳಲ್ಲಿ ಅನೇಕ ಸ್ತ್ರೀಯರ ಹೆಸರುಗಳು ಕಂಡುಬರುತ್ತವೆ. ಶಿವಯೋಗ ಸಾಧನೆಯಲ್ಲಿ ಅನೇಕ ಸ್ತ್ರೀಯರು ಕಂಡುಬರುತ್ತಾರೆ.

ವೈರಾಗ್ಯನಿಧಿ ಅಕ್ಕಮಹಾದೇವಿ, ನಿಜಲಿಂಗಿ ನೀಲಾಂಬಿಕೆ, ಶಿವಯೋಗಿ ಅಕ್ಕನಾಗಮ್ಮ, ಗೌರಮ್ಮ , ರುದ್ರಾಣಿ, ಶಿವಮಾಯಿದೇವಿ, ಸಿದ್ದಾದೇವಿ, ಕಾಳವ್ವೆ, ಸೊಮಮ್ಮ , ಅಮುಗೆ ರಾಯಮ್ಮ , ಸತ್ಯಕ್ಕ, ಎಣ್ಣೆಯ ಚೆನ್ನಮ್ಮ, ಅಕ್ಕಮ್ಮ, ಕಾಳಮ್ಮ, ಕಲ್ಲವ್ವ, ಕಲ್ಯಾಣಮ್ಮ, ಕೊಡದ ಮಾರವ್ವ, ಕಾಯಕಯೋಗಿಣಿಯರಾದ ಲಕ್ಕಮ್ಮ, ಮಾಹಾದೇವಿ, ಕಲ್ಯಾಣಮ್ಮ, ರೆಮ್ಮವ್ವೆ , ಅಕ್ಕಮ್ಮ, ವೀರಮ್ಮ, ಹೀಗೆ ನೂರಾರು ಸ್ತ್ರೀಯರೂ ಒಂದೊಂದು ತತ್ವವನ್ನು ಪಿಡಿದು ಅಮರರಾದರು. ಇವರಲ್ಲಿ ಸುಮಾರು ಮೂವತ್ತಾರಕ್ಕಿಂತ ಹೆಚ್ಚು ಶರಣೆಯರು ವಚನಗಳನ್ನು ರಚಿಸಿದ್ದಾರೆ.

**ವಚನ ಸಾಹಿತ್ಯದ ರೂವಾರಿಗಳು** :

ಕನ್ನಡ ಸಾಹಿತ್ಯದ ಹೆಮ್ಮೆಯ ಮತ್ತು ಮಹತ್ವದ ಸಾಹಿತ್ಯ ಎನಿಸಿಕೊಂಡಿರುವ ವಚನ ಸಾಹಿತ್ಯದ ರೂವಾರಿಗಳಾಗಿದ್ದಾರೆ ಈ ಗಣಂಗಳು. 770 ಗಣಂಗಳಲ್ಲಿ 300 ಕಿಂತ ಹೆಚ್ಚು ಶರಣರ ವಚನಗಳು ಲಭ್ಯವಾಗಿವೆ. ಉಳಿದವರು ಕೂಡಾ ವಚನಗಳನ್ನು ರಚಿಸಿರಬಹುದು, ಆದರೆ ಕನ್ನಡಿಗರ ದುರ್ದೈವ. ಅವು ಲಭ್ಯವಾಗಿಲ್ಲ. ವಿಶ್ವಸಾಹಿತ್ಯಕ್ಕೆ ಕನ್ನಡಿಗರು ಕೊಟ್ಟ ಕಾಣಿಕೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಈ ಸಾಹಿತ್ಯವನ್ನು ಅವರು ರಚಿಸಿರುವುದು ಪಾಂಡಿತ್ಯ ಪ್ರದರ್ಶನಕ್ಕಾಗಿ ಅಲ್ಲ, ಬಿರುದು ಬಾವಲಿಗಳನ್ನು ಪಡೆಯಬೇಕೆಂಬ ಆಸೆಯಿಂದಲ್ಲ. ಅವುಗಳನ್ನು ರಚಿಸಿರುವುದಕ್ಕೆ ಪ್ರೇರಣೆ ಯಾವುದು ಎಂಬುದನ್ನು ಚೆನ್ನಬಸವಣ್ಣನವರು ಹೀಗೆ ಹೇಳುತ್ತಾರೆ.

ಪಾತಾಳದಗ್ಗವಣೆಯ ನೇಣಿಲ್ಲದೆ.
ತೆಗೆಯಬಹುದೇ ಸೋಪಾನ ಬಲದಿಂದಲ್ಲದೆ.?
ಶಬ್ದ ಸೋಪಾನ ಬಲದಿಂದ ನೀಶಬ್ದ
ಸೋಪಾನ ಕಟ್ಟಿ ನಡೆಸಿದರು ನಮ್ಮ ಪುರಾತನರು.
ದೇವ ಲೋಕಕ್ಕೆ ಬಟ್ಟೆ ಕಾಣಿರೋ
ಮರ್ತ್ಯದ ಮನದ ಮೈಲಿಗೆಯ ಕಳೆಯಲೆಂದು
ಗೀತಮಾತೆಂಬ ಜ್ಯೋತಿಯ ಬೆಳಗಿಟ್ಟರು.
ಕೂಡಲ ಚನ್ನಸಂಗಯ್ಯ ನಮ್ಮ ಶರಣರು

ಇಡೀ ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟ್ಯ ಸ್ಥಾನವನ್ನು ಪಡೆದಿರುವ ವಚನ ಸಾಹಿತ್ಯ ಅಮರ ಗಣಂಗಳ ಅನುಭಾವದ ಕೆನೆ ಆಧ್ಯಾತ್ಮದ ಕೊನೆ ಅವರ ಉಸಿರು. ಅವು ದೇವಲೋಕಕ್ಕೆ ದಾರಿ. ಮರ್ತ್ಯದ ಕತ್ತಲೆಯ ಕಳೆದ ಜ್ಯೋತಿ. ವಚನ ಸಾಹಿತ್ಯದಿಂದ ಅಮರಗಣಂಗಳು ಅಮರರಾದರು. ಮುನ್ನೂರಕ್ಕಿಂತ ಹೆಚ್ಚು ವಚನಕಾರರ ವಚನಗಳು ಲಭ್ಯವಾಗಿವೆ.

ಹೀಗೆ ಅಮರಗಣಂಗಳು ಸಾಧಿಸಿದ ಸಾಧನೆ ಅತೀ ದೊಡ್ಡದಾಗಿರುವ ಸಾಧನೆಯಾಗಿದೆ. ತಮ್ಮ ವೈಯುಕ್ತಿಕ ಜೀವನ ಭದ್ರಗೊಳಿಸುವದರೊಂದಿಗೆ ಸಮಾಜವನ್ನು ಭದ್ರಗೊಳಿಸಿದ ಶ್ರೇಯಸ್ಸು ಅವರಿಗೆ ಸಲ್ಲುತ್ತದೆ. ತಾವು ಬದುಕಿದ ಸಂದರ್ಭದಲ್ಲಿ ಮಾತ್ರವಲ್ಲದೆ ಇಂದಿಗೂ ,ಎಂದೆಂದಿಗೂ ಅವರ ನಡೆದ ದಾರಿ ಸಮಾಜಕ್ಕೆ ದಾರಿದೀಪವಾಗಿದೆ. ಇಂದಿನ ವಿಶ್ವವನ್ನು ಸಹ ಕಟ್ಟುವಲ್ಲಿ ಅವರ ನಡೆ–ನುಡಿ ಮಾರ್ಗದರ್ಶನವಾಗಿವೆ. ವಿಶ್ವದ ಸಕಲ ಜನಾಂಗವು ಅನುಸರಿಸುವ ತತ್ವಗಳು ಅವರದಾಗಿವೆ.

ಹೀಗೆ ಅಮರಗಣವೆಂಬ ಪರಿಭಾಷೆಯನ್ನು ಎತ್ತಿಕೊಂಡು ಅರ್ಥೈಸಿದರೆ ಜಡವಾದ, ಮತೀಯ ಗೊಂದಲಮಯವಾದ,ಭೃಷ್ಟವಾದ ಸಮಾಜ, ಜಾತಿ, ಮತ, ಲಿಂಗಗಳ ಭೇದಗಳ ಮತೀಹೀನವಾದ ಕುಸಂಸ್ಕೃತಿಗಳನ್ನು ಕಳೆದುಕೊಂಡು, ಅನುಭವವೇದ್ಯವಾದ ಜ್ಞಾನವನ್ನು ಪಡೆದುಕೊಂಡು ಎಲ್ಲೆಲ್ಲಾ ದೇವರಿದ್ದಾನೆ ಎಲ್ಲರೊಳು ದೇವರಿದ್ದಾನೆ ಎಂದು ಅರಿತುಕೊಂಡು ಬಾಳುವ ತತ್ವವನ್ನು ಅಮರಗಣಂಗಳು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು.

**REFERENCES**

| Major Research Project entitled "770 Amar Ganangalu" funded by The UGC, New Delhi.(Awarded to Dr.(Mrs.) NEELAMBIKA POLICEPATIL. |